ಮಾರ್ಚ್ 'ಮಯೂರ'ದಲ್ಲಿ ಕತೆ, ಕವಿತೆ, ಸಂದರ್ಶನ, ಪ್ರಬಂಧ – ಹೀಗೆ ವೈವಿಧ್ಯಮಯ ಸಾಹಿತ್ಯವನ್ನು ಕೊಡಲಾಗಿದೆ. ತುಂಬಾ ಇಷ್ಟವಾದ ಸಂಗ್ರಾಹ್ಯ ಸಂಚಿಕೆ. ನಮ್ಮ ಮೆಚ್ಚಿನ ಪತ್ರಿಕೆ ಅನುಗಾಲ ಹೀಗೆಯೇ ಇರಲಿ.

**ಅನುಪಲ್ಲವಿ, ಮೂಡುಬಿದಿರೆ**

'ಮಯೂರ' ಮುಖಪುಟ ಆಕರ್ಷಕವಾಗಿದೆ. ಈ ಸಂಚಿಕೆಯಲ್ಲಿ ಮೊದಲಿಗೆ ಸೆಳೆದಿದ್ದು ನಾಗತಿಹಳ್ಳಿ ಚಂದ್ರಶೇಖರ ಅವರ 'ನನ್ನ ಕಥಾಪ್ರಸಂಗ'. ಸಿಡ್ನಿ ಶ್ರೀನಿವಾಸ್ ಅವರ ಕತೆ 'ಮಮತೆಯ ಸುಳಿ' ಮನೋಜ್ಞವಾಗಿದೆ.

**ನೀಲಮ್ಮ ಕುಮಾರಪ್, ಲಿಂಗಸುಗೂರು**

'ನನ್ನ ಕಥಾಪ್ರಸಂಗ'ದಲ್ಲಿ ನಾಗತಿಹಳ್ಳಿ ಚಂದ್ರಶೇಖರ್ ತಮ್ಮ ಬರವಣಿಗೆಯ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಈ ಅಂಕಣ ಹೊಸ ಕತೆಗಾರರಿಗೆ, ಸಾಹಿತ್ಯದ ಆಸಕ್ತರಿಗೆ ಬಹಳ ಉಪಯುಕ್ತವಾಗುವಂತಿದೆ.

**ಅನುಪಮಾ ಶಿವಕುಮಾರ್, ಮೈಸೂರು**

ಕವಿ ಎಸ್. ಮಂಜುನಾಥ್ ಅವರೊಂದಿಗೆ ಅಬ್ದುಲ್ ರಶೀದ್ ಅವರು ನಡೆಸಿದ ಮಾತುಕತೆ 'ಕವಿತೆ ಭಾಷೆಯದೇ ಆದ ಹಂಬಲ' ಚೆನ್ನಾಗಿ ಮೂಡಿಬಂದಿದೆ. ಇಂದು ಮಂಜುನಾಥ್ ಇಲ್ಲ. ಆದರೆ, ತಮ್ಮ ಕವಿತೆಗಳ ಮೂಲಕ ನಮ್ಮ ಮನದಲ್ಲಿ ಜೀವಂತವಾಗಿದ್ದಾರೆ.

**ಕಾಳೀಹುಂಡಿ ಶಿವಕುಮಾರ್, ಮೈಸೂರು**

ಭಾಷೆಯ ಹಸಿವನ್ನು ಧ್ವನಿಸಿದ ಕವಿ ಎಸ್. ಮಂಜುನಾಥ್ ಅವರ ಮಾತುಗಳನ್ನು ಓದುತ್ತ ಕಣ್ಣುಗಳು ತೇವಗೊಂಡವು.

**ಎಚ್. ಆನಂದಕುಮಾರ್, ಚಿತ್ರದುರ್ಗ**




ಮಂಗಳಾ ಸಿ. ಅವರ ಕತೆ 'ಅವಳ ಪ್ರಶ್ನೆ' ಮನ ಕಲಕುವಂತಹದು. ಅದು ಪುರುಷ ಲೋಕದ ಕ್ರೌರ್ಯಗಳ ವಿರಾಟರೂಪವನ್ನು ಎಳೆ ಎಳೆಯಾಗಿ ಬಿಚ್ಚಿಟ್ಟಿದೆ.

**ಕೆ.ಪಿ. ರಾಮಗುಂಡಿ, ಬೈಲಹೊಂಗಲ**

ಬಹಳ ತಿಂಗಳ ನಂತರ ಈ ಸಂಚಿಕೆಯಲ್ಲಿ ಕವಿತೆಗಳ ಮಹಾಪೂರ. ಒಂದಕ್ಕಿಂತ ಒಂದು ಅದ್ಭುತ. ಉಣಬಡಿಸಿದ ಕವಿಗಳಿಗೆ ನಮನ.

**ತಲಕಾಡು ಶ್ರೀನಿಧಿ**

ಕಮಲಾದಾಸ್ ಅವರ 'ಒಂದು ಪ್ರೀತಿಯ ಕತೆ'(ಕನ್ನಡಕ್ಕೆ: ಕೆ.ಕೆ. ಗಂಗಾಧರನ್) ಓದಿ ಮನಮಿಡಿಯಿತು. ಜಾನು–ಮೂಗರ ಸಂವಾದ ಮತ್ತು 'ಮೂಗ'ನ ಮುಗ್ಧ ಪ್ರೇಮ ಕತೆಯನ್ನು ಕುತೂಹಲದಿಂದ ಓದಿಸಿಕೊಳ್ಳುತ್ತದೆ.

**'ಕೊಹಿಮ', ಬಸರಕೋಡು**

'ಪರೀಕ್ಷೆಯ ಮೇಲ್ವಿಚಾರಣೆ'(ಮನೋಜ ಗೋಡಬೋಲೆ) ಪ್ರಬಂಧವನ್ನು ಪರೀಕ್ಷೆಗಳ ಮೇಲ್ವಿಚಾರಕರು, ವಿದ್ಯಾರ್ಥಿಗಳು, ಜನಸಾಮಾನ್ಯರು ಎಲ್ಲರೂ ಓದಬೇಕು. ಅದು ನಕ್ಕು ನಗಿಸುವ, ವಿಚಾರ ಭರಿತ, ಮಾಹಿತಿ ಪೂರ್ಣ ಪ್ರಬಂಧವಾಗಿದೆ.

**ನಾರಾಯಣ ಯಾಜಿ, ಶಿರಾಲಿ**